

ವಿಜಯ್ ಶಂಕರ್



ಕೆ.ಎಲ್. ರಾಹುಲ್



ರಿಶಬ್ ಪಂತ್

ಹೈದರಾಬಾದ್‌ನ ಬ್ಯಾಟಿಂಗ್ ಪ್ರತಿಭೆ ರಾಯುಡು ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಭಾರತ ಅಂತರರಾಷ್ಟ್ರೀಯ ತಂಡಕ್ಕೆ ಮರಳಿದ ಮೇಲೆ ತಂಡದ ಪರವಾಗಿ ಅತಿ ಹೆಚ್ಚು ರನ್ ಗಳಿಸಿದವರ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿ ಇದ್ದಾರೆ. ಆಗಿನಿಂದ ಈ ವರ್ಷದ ಆರಂಭದಲ್ಲಿ ಆಸ್ಟ್ರೇಲಿಯಾ ಎದುರು ಭಾರತ 2–3ರಲ್ಲಿ ಏಕದಿನ ಕ್ರಿಕೆಟ್ ಸರಣಿ ಸೋತಿತಲ್ಲ; ಅಲ್ಲಿಯವರೆಗೆ 24 ಪಂದ್ಯಗಳನ್ನು ನಮ್ಮ ತಂಡ ಆಡಿದೆ. ಆ ಪೈಕಿ ರಾಯುಡು 21ರಲ್ಲಿ ಆಡಿದ್ದಾರೆ. ಒಂದು ಶತಕ, ನಾಲ್ಕು ಅರ್ಧ ಶತಕಗಳು ಈ ಅವಧಿಯಲ್ಲಿ ಅವರ ಖಾತೆಗೆ ಜಮೆಯಾಗಿವೆ. 63.33ರ ಸರಾಸರಿ ಹಾಗೂ 82.25ರ ಸ್ಟ್ರೈಕ್ ರೇಟ್‌ನಲ್ಲಿ ಅವರು 190 ರನ್ ಸೇರಿಸಿದ್ದರು. ಕಳೆದ ಏಳು ತಿಂಗಳಲ್ಲಿ ರಾಯುಡು 14 ಪಂದ್ಯಗಳಲ್ಲಿ ನಾಲ್ಕನೇ ಕ್ರಮಾಂಕದಲ್ಲಿ ಆಡಿದ್ದಾರೆ. 42.18ರ ಸರಾಸರಿಯಲ್ಲಿ 464 ರನ್‌ಗಳನ್ನು ಆ ಜವಾಬ್ದಾರಿ ನಿಭಾಯಿಸಿ ಅವರು ಗಳಿಸಿದ್ದಾರೆ.

ಹೀಗಿದ್ದೂ ಕಳೆದ ಜನವರಿಯಲ್ಲೇ ನಾಯಕ ವಿರಾಟ್ ಕೊಹ್ಲಿ, ನಾಲ್ಕನೇ ಸ್ಥಾನಕ್ಕೆ ಸೂಕ್ತ ಆಟಗಾರನ ಹುಡುಕಾಟವಿನ್ನೂ ನಡೆದಿದೆ ಎಂದಿದ್ದರು. ಆಗಲೇ ರಾಯುಡು ಅವರಿಗೆ ಈ ಸಲ ವಿಶ್ವಕಪ್‌ನಲ್ಲಿ ಅವಕಾಶ ಸಿಗುವ ಕುರಿತು ಗುಮಾನಿ ಮೂಡಿತ್ತು. ಆಸ್ಟ್ರೇಲಿಯಾ ವಿರುದ್ಧದ ಏಕದಿನ ಪಂದ್ಯಗಳ ಸರಣಿಯಲ್ಲೊಮ್ಮೆ ಬೌಲಿಂಗ್ ಶೈಲಿಯ ಕುರಿತು ತಕರಾರು ವ್ಯಕ್ತವಾದ ಬಳಿಕ ರಾಯುಡ್ ಮತ್ತೆ ಬೌಲಿಂಗ್ ಮಾಡುವ ಸಾಹಸಕ್ಕೆ ಕೈಹಾಕಲಿಲ್ಲ. ಅಂತರರಾಷ್ಟ್ರೀಯ ಕ್ರಿಕೆಟ್‌ಗೇ ಹೆಚ್ಚು ಒತ್ತುನೀಡಬೇಕೆಂದು ಪ್ರಥಮದರ್ಜೆ ಕ್ರಿಕೆಟ್ ಪಂದ್ಯಗಳ ಆಡುವುದನ್ನೂ ಬಿಟ್ಟುಬಿಟ್ಟಿದ್ದರು. ಬಹುಶಃ ಇವೆಲ್ಲ ಅವರಿಗೆ ಉಲ್ಟಾ ಹೊಡೆದಿವೆ. ಫೀಲ್ಡಿಂಗ್ ವಿಷಯದಲ್ಲಿ ವಿಜಯ್ ಶಂಕರ್ ಚಿರತೆ. ರಾಯುಡು ಕಾಲುಗಳಲ್ಲಿ ಅಷ್ಟು ಕಸುವಿಲ್ಲ.

ವಿಜಯ್ ಶಂಕರ್ ಏನೂ ಧುತ್ತೆಂದು ಪ್ರತ್ಯಕ್ಷವಾಗಿ ಅವಕಾಶ ಗಿಟ್ಟಿಸಿಲ್ಲ. ಅವರೂ ಸಾಕಷ್ಟು ಸೈಕಲ್ ಹೊಡೆದವರೇ. ಮೂರು ಐಪಿಎಲ್ ಋತುಗಳಲ್ಲಿ ಆಯ್ಕೆಯಾಗಿದ್ದರೂ ಆಡಿದ್ದು ಒಂದೇ ಪಂದ್ಯ. ಆಮೇಲಷ್ಟೇ ಅವರಿಗೆ ಶುಕ್ರದೆಸೆ. ಈಗ ಮಧ್ಯಮವೇಗಿ. ತಾವು ಬದಲಾದ ಕ್ಷಣ ಅವರಿಗೆ ಖುಷಿ ಕೊಡುತ್ತಿರಬಹುದು. ರಾಯುಡು ಕಣ್ಣೀಗ ಕವಲುದಾರಿ. ರನ್ ಗಳಿಕೆಯಲ್ಲಿ ಹಿಂದೆ ಬೀಳದಿದ್ದರೂ ಅವರೀಗ ವಿಶ್ವಕಪ್ ತಂಡದ ರಿಸರ್ವ್ ಆಟಗಾರ.

ವಿಶ್ವಕಪ್‌ಗೆ ಭಾರತಕ್ಕೆ ತಂಡ ಆಯ್ಕೆಯಾದ ದಿನವೇ ಆಸ್ಟ್ರೇಲಿಯಾದಲ್ಲೂ ತಂಡವನ್ನು ಪ್ರಕಟಿಸಿದರು. ಅಲ್ಲಿ ಐವರು ವೇಗದ ಬೌಲರ್‌ಗಳು. ನಮ್ಮಲ್ಲಿ ನಾಲ್ವರು ಆಲ್‌ರೌಂಡರ್‌ಗಳು. ಬಹುಶಃ ವಿಜಯ್ ಶಂಕರ್ ಚುರುಕುತನವನ್ನು ಅವರು ಬೆರಗುಗಣ್ಣಿನಿಂದ ನೋಡುತ್ತಿರಬಹುದು. ಅಂಥ ಸಂದರ್ಭದಲ್ಲೇ ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ (ಐಪಿಎಲ್) ಡೆಲ್ಲಿ ಕ್ಯಾಪಿಟಲ್ಸ್ ತಂಡದವರಿಗೆ ಪಾಠ ಹೇಳುತ್ತಿರುವ, ಆಸ್ಟ್ರೇಲಿಯಾದವರೇ ಆದ ರಿಕಿ ಪಾಂಟಿಂಗ್ ಅವರಿಗೆ ಸಮಾಧಾನವಿಲ್ಲ. ರಿಷಭ್ ಪಂತ್ ತಲೆಮೇಲೆ ವಿಶ್ವಕಪ್ ಟೋಪಿ ಇರಲೇಬೇಕಿತ್ತು ಎನ್ನುವುದು ಅವರ ಹೃದಯಾಳದ ಮಾತು. ಪಂತ್ ಹಾಗೂ

### 2019ರ ವಿಶ್ವಕಪ್‌ಗೆ ಭಾರತ ತಂಡ

- ವಿರಾಟ್ ಕೊಹ್ಲಿ (ನಾಯಕ)
- ರೋಹಿತ್ ಶರ್ಮ (ಉಪ ನಾಯಕ
- ಶಿಖರ್ ಧವನ್
- ಕೆ.ಎಲ್. ರಾಹುಲ್
- ವಿಜಯ್ ಶಂಕರ್
- ಎಂ.ಎಸ್. ದೋನಿ (ವಿಕೆಟ್ ಕೀಪರ್)
- ಕೇದಾರ್ ಜಾಧವ್
- ದಿನೇಶ್ ಕಾರ್ತಿಕ್
- ಯಜುವೇಂದ್ರ ಚಾಹಲ್
- ಕುಲದೀಪ್ ಯಾದವ್
- ಭುವನೇಶ್ವರ ಕುಮಾರ್
- ಜಸ್ಪ್ರೀತ್ ಬೂಮ್ರಾ
- ಹಾರ್ದಿಕ್ ಪಾಂಡ್ಯ
- ರವೀಂದ್ರ ಜಡೇಜಾ
- ಮೊಹಮ್ಮದ್ ಸಮಿ

ದಿನೇಶ್ ಕಾರ್ತಿಕ್ ಇಬ್ಬರಲ್ಲಿ ಯಾರು ಹಿತವರು ಎಂಬ ಪ್ರಶ್ನೆ ಎಂಎಸ್‌ಕೆ ಪ್ರಸಾದ್ ನೇತೃತ್ವದ ಆಯ್ಕೆ ಮಂಡಳಿ ಎದುರು ಬಂದಿತ್ತು. ಪಂತ್ ತುಡುಗು ಬುದ್ಧಿಯ ಹುಡುಗ. ಐಪಿಎಲ್‌ನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಪರವಾಗಿ ಚೆನ್ನಾಗಿಯೇ ರನ್ ಗಳಿಸಿದರೂ 'ಫಿನಿಶಿಂಗ್' ಮಾಡಲು ಬೇಕಾದ ತಾಳ್ಮೆ ಅವರಿಗೆ ಇಲ್ಲ. ವಿಕೆಟ್ ಕೀಪರ್ ಆಗಿ ಅವರಲ್ಲಿ ಸಾಕಷ್ಟು ದೌರ್ಬಲ್ಯಗಳಿವೆ ಎನ್ನುವುದು ಕೇಳಿಬಂದಿರುವ ಟೀಕೆ. ದಿನೇಶ್ ಕಾರ್ತಿಕ್ ಒಳ್ಳೆಯ 'ಫಿನಿಷರ್' ಹಾಗೂ ವಿಕೆಟ್ ಹಿಂದೆಯೂ ಚುರುಕು ಎಂಬ ಶಹಬ್ಬಾಸ್‌ಗಿರಿಯನ್ನೂ ಚಿಂತಕರ ಚಾವಡಿ ನೀಡಿದೆ. ಸದ್ಯಕ್ಕೆ ತಕ್ಕಡಿಯಲ್ಲಿರಿಸಿದರೆ, ಪಂತ್ ಕಡೆಗೇ ತುಲಾಭಾರ ಯಂತ್ರ ವಾಲಬಹುದು! ಈ ಹೊತ್ತಿನಲ್ಲಿ ಬೇಕಾಗಿರುವ ದಾಳಿಕೋರತನ ರಿಷಭ್ ಪಂತ್ ಆಟದಲ್ಲಿ ಇದೆ ಎನ್ನುವುದಕ್ಕೆ ಚುಟುಕು ಕ್ರಿಕೆಟ್‌ನಲ್ಲಿ ಸಾಕಷ್ಟು ಸಾಕ್ಷ್ಯಗಳು ಸಿಕ್ಕಿವೆ. ಕನಸಿನಲ್ಲೂ ಬೌಲರ್‌ಗಳನ್ನು ಕಾಡುವಂತೆ ಅವರು ಶಾಟ್‌ಗಳನ್ನು ಸುಧಾರಿಸಿ ಹೊಡೆಯಬಲ್ಲರು.

ಪಂತ್ ಕಡೆಗೆ ತಕ್ಕಡಿ ಮುಳ್ಳು ಹೆಚ್ಚು ವಾಲಿದ್ದೇ ಆಯ್ಕೆದಾರರ ಮುಖಂಡ ಎಂಎಸ್‌ಕೆ ಪ್ರಸಾದ್ ಸ್ವಲ್ಪ ಮೃದು ಮಾತುಗಳನ್ನಾಡಿದ್ದಾರೆ. 'ಮಹೇಂದ್ರ ಸಿಂಗ್ ದೋನಿ ಗಾಯಾಳುವಾದರಷ್ಟೇ ದಿನೇಶ್ ಕಾರ್ತಿಕ್‌ಗೆ ಆಡುವ ಹನ್ನೊಂದು ಮಂದಿಯಲ್ಲಿ ಸ್ಥಾನ ಸಿಗಬಹುದು. ಪಂತ್ ಇನ್ನೂ ಚಿಕ್ಕವರು. ಮುಂದೆ ಸಾಕಷ್ಟು ಅವಕಾಶಗಳು ಸಿಗಲಿವೆ' ಎನ್ನುವ ಮಾತು ರಿಷಭ್‌ಗೆ ಸಮಾಧಾನ ತಂದಿರಲಿಕ್ಕಿಲ್ಲ.

ಪಂತ್ ರಕ್ತ ಕುದಿಯುತ್ತಿದೆ. ಅವರಿಗಿನ್ನೂ 21 ವರ್ಷ ವಯಸ್ಸು. 33 ವರ್ಷದ ದಿನೇಶ್ ಅನುಭವಿಯೇನೋ ಹೌದು. ಬರೀ 5 ಏಕದಿನ ಪಂದ್ಯಗಳನ್ನು ಆಡಿರುವ ದೆಹಲಿಯ ಪಂತ್‌ಗೂ, 91 ಏಕದಿನ ಪಂದ್ಯಗಳನ್ನು ಆಡಿರುವ ದಿನೇಶ್ ಕಾರ್ತಿಕ್‌ಗೂ ಅನುಭವದಲ್ಲಿ ಅಜಗಜಾಂತರ. ದೋನಿ ಗಾಯಗೊಂಡರಷ್ಟೇ ಅವಕಾಶ ಎಂದಮೇಲೆ ಪಂತ್ ಅವರನ್ನೇ ಹೆಕ್ಕಬಹುದಿತ್ತಲ್ಲವೆ ಎಂಬ ಕೆಲವರ ಪ್ರಶ್ನೆ ಎಂಎಸ್‌ಕೆ ಪ್ರಸಾದ್ ಅವರನ್ನು ಚುಚ್ಚುತ್ತಿರಬಹುದು. ವಿಜಯ್ ಶಂಕರ್ ಹಾಗೂ ರಾಯುಡು ತುಲನೆಯಲ್ಲಿ ಅನುಭವ ಪರಿಗಣನೆಗೆ ಬಂದಿಲ್ಲ. 28ರ ವಿಜಯ್ ಶಂಕರ್, 33ರ ರಾಯುಡುಗಿಂತ ಹಿತವೆನಿಸಬಹುದಾದರೆ ಪಂತ್ ಯಾಕಾಗಬಾರದು ಎಂಬ ಪ್ರಶ್ನೆ 'ಝೂಮ್' ಆದದ್ದೇ ಅವರನ್ನೂ 'ರಿಸರ್ವ್ ಆಟಗಾರ'ರ ಬೆಂಚ್ ಮೇಲೆ ತಂದು ಕೂರಿಸಿದ್ದಾರೆ.

ಮಂಕುಬಡಿದಂತಾಗಿದ್ದ ಕೆ.ಎಲ್. ರಾಹುಲ್ ಐಪಿಎಲ್‌ನಲ್ಲಿ ಮೈಕೊಡವಿಕೊಂಡು ಆಡಿದ್ದೇ ಆಯ್ಕೆದಾರರ ಕಣ್ಣಿಳೆದುಬಿಟ್ಟರು. ಅನಿವಾರ್ಯ ಸಂದರ್ಭದಲ್ಲಿ ವಿಕೆಟ್ ಕೀಪರ್ ಆಗಬಲ್ಲ ಆಟಗಾರ ಅವರೆನ್ನುವುದು ಬೋನಸ್ಸು. ಹಾರ್ದಿಕ್ ಪಾಂಡ್ಯ ಕಸುವಿನಲ್ಲಿ ಕಪಿಲ್ ನೆನಪಿಸುವ ಕೆಲವು ಅಂಶಗಳಿವೆ ಎನ್ನುವವರೂ ಇದ್ದಾರೆ. ರವೀಂದ್ರ ಜಡೇಜಾ ಕೂಡ ಇಂಗ್ಲೆಂಡ್ ಪಿಚ್‌ಗಳಲ್ಲಿ ಬೌಲಿಂಗ್ ಮಾಡಬಲ್ಲ ಸಾಮರ್ಥ್ಯ ಇರುವವರೇ. ಹೊಸ ಚಿಗುರು, ಹಳೆ ಬೇರಿನಂಥ ತಂಡ ಇಂಗ್ಲೆಂಡ್‌ನ ಈಗ ಸಪಾಟಾಗಿರುವ ಪಿಚ್‌ಗಳಲ್ಲಿ ಹೇಗೆ ಎದುರಾಳಿಗಳನ್ನು ಕಟ್ಟಿಹಾಕುವರೋ ನೋಡಬೇಕು. ಆಲ್ ರೌಂಡರ್‌ಗಳಲ್ಲಿ ಯಾರಾದರೂ ಕಪಿಲ್ ದೇವ್ ಆಗದಿದ್ದರೆ ಹೋಗಲಿ, ಅಮರ್ ನಾಥ್ ಆದರೂ ಆಗಬೇಕಷ್ಟೆ!